ಇಂದು ದಿ:**15-11-2024** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಕೆ ವಕೀಲರಿಂದ 19 ಮತ್ತು 20 ನೇ ಪ್ರತಿವಾದಿಗಳ ಪರ:**

ನಾನು ನನ್ನ ವಾದಪತ್ರದಲ್ಲಿ ನನ್ನ ತಾಯಿ ಮತ್ತು ಸಹೋದರರು ಅಸಲು ದಾವಾ ನಂಬರ್-14/2002 ನ್ನು ತಮ್ಮತಮ್ಮಲ್ಲಿ ಶರೀಕಾಗಿ ಡಿಕ್ರಿ ಪಡೆದ ಬಗ್ಗೆ ತಿಳಿಸಿದ್ದೇನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪರುಶುರಾಮಪ್ಪ ನನ್ನ ಅಣ್ಣ, ನನ್ನ ತಾಯಿ ಮತ್ತು ನನ್ನ ಉಳಿದ ಸಹೋದರರ ವಿರುದ್ದ ದಾವೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. 1996 ರಲ್ಲಿ ಈ ದಾವೆಯನ್ನು ದಾವಣಗೆರೆಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಈ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವಾಗ ತೀರಿಕೊಂಡರು ಎಂದು ಇಸವಿ ಗೊತ್ತಿಲ್ಲ. ಸುಮಾರು 30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವ ಪೂರ್ವದಲ್ಲಿ ಈ ದಾವೆಯ ಎರಡೂ ಸ್ವತ್ತುಗಳು ಆತನ ಹೆಸರಿನಲ್ಲಿ ಇದ್ದವು ಎಂದರೆ ಸರಿ. ದಿನಾಂಕಃ16-03-1989 ರಂದು ನನ್ನ ತಂದೆ ತೀರಿಕೊಂಡರು ಎಂದರೆ ಇರಬಹುದು. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಸೀತಾ ಬಾಯಿ, ನನ್ನ ಸಹೋದರರು ಈ ದಾವಾ ಆಸ್ತಿಗಳನ್ನು ಅನುಭವಿಸುತ್ತಾ ಬಂದರು ಎಂದರೆ ಸರಿ. ದಿನಾಂಕಃ12-01-1993 ರಂದು ನನ್ನ ತಾಯಿ ಮತ್ತು ಸಹೋದರರು ವಿಭಾಗ ಮಾಡಿಕೊಂಡರು ಎಂದರೆ ಗೊತ್ತಿಲ್ಲ. ಈ ಮೌಖಿಕ ಪಾಲುವಿಭಾಗದ

ಪ್ರಕಾರ ನನ್ನ ಅಣ್ಣ ಪರುಶುರಾಮ ನನ್ನ ತಾಯಿ ಮತ್ತು ಉಳಿದ ಸಹೋದರರಿಗೆ ನೊಂದಾಯಿತ ಪಾಲುವಿಭಾಗ ಪತ್ರ ಮಾಡಿಕೊಳ್ಳೋಣ ಎಂದು ಸಾಕಷ್ಟು ಬಾರಿ ಕೇಳಿದರೂ ಅವರು ಬರದೇ ಇದ್ದಾಗ 1996 ರಲ್ಲಿ ದಾವಣಗೆರೆಯ ನ್ಯಾಯಾಲಯದಲ್ಲಿ ದಾವೆ ಮಾಡಿದನು ಎಂದರೆ ಗೊತ್ತಿಲ್ಲ. 1996 ರಿಂದ 2003 ರವರೆಗೆ ನನ್ನ ಮತ್ತು ನನ್ನ ತಾಯಿ ಮತ್ತು ಸಹೋದರರ ನಡುವಿನ ಸಂಬಂಧ ಚೆನ್ನಾಗಿತ್ತು ಎಂದರೆ ಸರಿಯಲ್ಲ. 1996 ರಿಂದ 2003 ರವರೆಗೆ ನಾನು ಮತ್ತು ನನ್ನ ಸಹೋದರಿಯರು ತವರು ಮನೆಗೆ ಹೋಗಿ ಬಂದು ಮಾಡಿರುತ್ತೇವೆ ಎಂದರೆ ಸಾಕ್ಷಿ ಹೊಲ ಮಾರುವ ಮೊದಲು ಬಂದಿರುತ್ತೇವೆ ಎಂದು ಹೇಳುತ್ತಾರೆ. 2008 ರಲ್ಲಿ ಹೊಲವನ್ನು ಮಾರಾಟ ಮಾಡಿದರು ಎಂದರೆ ಸರಿ. ಹೊಲ ಮಾರಾಟ ಮಾಡುವ ಮೊದಲು ನಿಗಧಿತವಾಗಿ ತವರು ಮನೆಗೆ ಹೋಗಿ ಬಂದು ಮಾಡುತ್ತಿದ್ದೇವು. ಪ್ರತಿ ವರ್ಷ ಹಬ್ಬಕ್ಕೆ, ಏನಾದರೂ ಕಾರ್ಯಕ್ರಮ ಇದ್ದರೆ ಬಂದು ಹೋಗಿ ಮಾಡುತ್ತಿದ್ದೆವು ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ನನ್ನ ಅಣ್ಣ ಹಾಕಿದ ದಾವೆ ಈ ದಾವೆ ಸಲ್ಲಿಸುವ 5 ವರ್ಷ ಮೊದಲೇ ಡಿಕ್ರಿಯಾದ ಬಗ್ಗೆ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಸಲ್ಲಿಸಿದ ದಾವೆಯ ಬಗ್ಗೆ ನನಗಾಗಲೀ ನನ್ನ ಸಹೋದರಿಯರಿಗಾಗಲೀ ಗೊತ್ತಿಲ್ಲ. ನಾನು ಮತ್ತು ನನ್ನ ತಂಗಿ ಮಂಜುಳಾ ಈ ದಾವೆಯಲ್ಲಿ ಇಬ್ಬರೂ ಕೂಡಿ ದಾವೆಯ ದಿನಾಂಕ ಇದ್ದಾಗ ಕೂಡಿ ಬರುತ್ತೇವೆ ಮತ್ತು ಏನಾಯಿತು ಎಂದು ಚರ್ಚಿಸುತ್ತೇವೆ ಎಂದರೆ ಸರಿ. ಆ ಕಾರಣದಿಂದ ಈ ದಾವೆಯ ಬಗ್ಗೆ ನನಗೆ ಎಷ್ಟು ಮಾಹಿತಿ ಇದೆ ಅಷ್ಟೇ ಮಾಹಿತಿ ನನ್ನ ತಂಗಿಗೂ ಇದೆ ಎಂದರೆ ಸರಿ. ನನ್ನ ಅಣ್ಣ 1996 ರಲ್ಲಿ ದಾವೆ ಸಲ್ಲಿಸಿದ ವಿಷಯ ನನಗೆ ಮೊದಲೇ ಗೊತ್ತಿದ್ದ ಕಾರಣ ಅದರ ಬಗ್ಗೆ ನನ್ನ ವಾದಪತ್ರದಲ್ಲಿ

ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಸಲ್ಲಿಸಿದ ದಾವೆಯ ಬಗ್ಗೆ ನನ್ನ ಯಾವ ಸಹೋದರಿಯರಿಗೂ ಗೊತ್ತಿಲ್ಲ. ಈ ದಾವೆ ಸಲ್ಲಿಸಲು ನಾನು ಮಾಹಿತಿ ನೀಡಿರುತ್ತೇನೆ. ವಾದಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನಾನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನನ್ನ ತಾಯಿ ಮತ್ತು 5 ಜನ ಸಹೋದರರ ನಡುವೆ ದಾವೆ ನಡೆದ ವಿಷಯ ನನಗೆ ಗೊತ್ತಿದ್ದು ಮತ್ತು ದಿನಾಂಕಃ05-02-2003 ರಂದು ಆ ದಾವೆ ರಾಜೀ ಡಿಕ್ರಿಯಾದ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆ ರಾಜೀ ಡಿಕ್ರಿಯ ಪ್ರಕಾರ ನನ್ನ ತಾಯಿ ಸೀತಾ ಬಾಯಿ ಇವಳಿಗೆ ದಾವಾ ಜಮೀನು ಐಟಂ ನಂಬರ್-1 ರಲ್ಲಿ 21 ವರೆ ಗುಂಟೆ, ನನ್ನ ಸಹೋದರರಿಗೆ ತಲಾ 33 ಕಾಲು ಗುಂಟೆ ಬಂತು ಎಂದರೆ ಸರಿಯಲ್ಲ. ರಾಜೀ ಡಿಕ್ರಿ ಪ್ರಕಾರ ಅವರವರ ಹಿಸ್ಸೆಗೆ ಅವರ ಪಾಲಿನ ಪ್ರಕಾರ ಕಂದಾಯ ದಾಖಲೆಗಳಲ್ಲಿ ಹೆಸರು ದಾಖಲಾಯಿತು ಎಂದರೆ ಸರಿ. ಆ ರಾಜೀ ಡಿಕ್ರಿಯ ಪ್ರಕಾರ ಬಂದ ಪಾಲನ್ನು ನನ್ನ ತಾಯಿ ಮತ್ತು ನನ್ನ ಸಹೋದರರು ಅವರವರ ಹಿಸ್ಸೆಯನ್ನು ಪ್ರತ್ಯೇಕವಾಗಿ ಅನುಭವಿಸುತ್ತಾ ಬಂದರು ಮತ್ತು ಈ ವಿಷಯ ನನಗೆ ಗೊತ್ತಿತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಸಹೋದರ ಬಾಬು ಮಾತ್ರ ತೀರಿಕೊಂಡಿದ್ದನು ಎಂದರೆ ಸರಿ. ಬಾಬುವಿನ ಹೆಂಡತಿ ಮತ್ತು ಮಕ್ಕಳು ಎಂದರೆ 4 ರಿಂದ 8 ನೇ ಪ್ರತಿವಾದಿಯರು ಎಂದರೆ ಸರಿ. ಬಾಬು ತೀರಿಕೊಂಡ ನಂತರ 4 ರಿಂದ 8 ನೇ ಪ್ರತಿವಾದಿಯರು ಆತನ ಹಿಸ್ಸೆಯನ್ನು ಅನುಭವಿಸುತ್ತಾ ಬಂದರು ಎಂದರೆ ಸರಿ. ನನ್ನ ತಾಯಿ ಮತ್ತು 4 ರಿಂದ 8 ನೇ ಪ್ರತಿವಾದಿ ಮತ್ತು ನನ್ನ ಉಳಿದ ಸಹೋದರರು ಈ ಐಟಂ ನಂಬರ್-1 ಆಸ್ತಿಯನ್ನು ತಮಗೆ ತೊಂದರೆ ಆದ ಕಾರಣ ಮಾರಾಟ ಮಾಡುವ ಉದ್ದೇಶದಿಂದ ಹೆಚ್.ಶಿವಪ್ಪ

ಇವರಿಗೆ ಜಿ.ಪಿ.ಎ ಬರೆದುಕೊಟ್ಟಿರು ಎಂದರೆ ಸರಿಯಲ್ಲ. ಶಿವಪ್ಪ ಇವರು ಹರಿಹರ ತಾಲೂಕಿನಲ್ಲಿ ಒಳ್ಳೆಯ ಹೆಸರು ಹೊಂದಿದ್ದ ವ್ಯಕ್ತಿ ಎಂದರೆ ಸರಿ. ಆ ಕಾರಣದಿಂದ ನನ್ನ ತಾಯಿ ಮತ್ತು ಸಹೋದರರು ಅವರ ಮೇಲೆ ವಿಶ್ವಾಸ ಇದ್ದ ಕಾರಣ, ದಾವಾ ಜಮೀನನ್ನು ಮಾರಾಟ ಮಾಡಲು ಜಿ.ಪಿ.ಎ ಬರೆದುಕೊಟ್ಟಿರು ಎಂದರೆ ಗೊತ್ತಿಲ್ಲ. ನಿ.ಪಿ-4 ನ್ನು ಸಾಕ್ಷಿಗೆ ಓದಿ ಕೇಳಲು ಈ ಕ್ರಯಪತ್ರವನ್ನು ಖರೀದಿಕೊಟ್ಟ ಬಗ್ಗೆ ತೋರಿಸಲು ಹಾಜರುಪಡಿಸಿದ್ದೇನೆ. ನಿ.ಪಿ-5, 6 ನ್ನು ಸಹ 19 ನೇ ಪ್ರತಿವಾದಿಗೆ ನನ್ನ ಸಹೋದರರು ಮಾರಾಟ ಮಾಡಿದ ಬಗ್ಗೆ ತೋರಿಸಲು ಹಾಜುರಪಡಿಸಿದ್ದೇನೆ. 2008 ರಲ್ಲಿ ನನ್ನ ಅಣ್ಣ ಬಾಬು ತೀರಿಕೊಂಡಿದ್ದನು ಎಂದರೆ ಸರಿ. ನನ್ನ ಅಣ್ಣ ತೀರಿಕೊಂಡ ನಂತರ 2003 ರಲ್ಲಿ ರಾಜೀ ಡಿಕ್ರಿಯ ಪ್ರಕಾರ ಬಂದ 33 ಕಾಲು ಗುಂಟೆ ನನ್ನ ಅತ್ತಿಗೆ 4 ನೇ ಪ್ರತಿವಾದಿ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಿ.ಪಿ-6 ನ್ನು ನಾನು 4 ನೇ ಪ್ರತಿವಾದಿ ಇವರು 19 ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಗ್ಗೆ ತೋರಿಸಲು ಹಾಜುರುಪಡಿಸಿದ್ದೇನೆ ಎಂದರೆ ಸರಿ. ನಿ.ಪಿ-7,8 ಮತ್ತು 9 ನ್ನು ನಾನು 20 ನೇ ಪ್ರತಿವಾದಿ ಟ್ರಸ್ಟ್ ನ ಮ್ಯಾನಜಿಂಗ್ ಟ್ರಸ್ಟಿ ಇವರಿಗೆ ನನ್ನ ಅಣ್ಣಂದಿರು ಮಾರಾಟ ಮಾಡಿದ ಬಗ್ಗೆ ತೋರಿಸಲು ಹಾಜರುಪಡಿಸಿದ್ದೇನೆ ಎಂದರೆ ಸರಿ. ರವಿ, ಕೃಷ್ಣಪ್ಪ ಮತ್ತು ಅಣ್ಣಪ್ಪ ಇವರಿಂದ ಖರೀದಿ ಮಾಡುವ ಮೊದಲು ಈ ಜಮೀನು ಭೂಸುಧರಣಾ ಕಾಯ್ದೆ ಅಡಿ ಮಂಜೂರು ಆದ ಕಾರಣ, ಸರ್ಕಾರದಿಂದ ಪೂರ್ವಾನುಮತಿ ಪಡೆದು 20 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ನಿ.ಪಿ4 ರಿಂದ 9 ದಾಖಲೆಗಳಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇದೆ. ಈ ದಾಖಲೆಗಳಲ್ಲಿ ಬರೆದಿರುವ

ಐಟಂ ನಂಬರ್-1 ಆಸ್ತಿಯ ವಿವರ, ಜಿ.ಪಿ.ಎ ಮತ್ತು ದಾವಾ ಜಮೀನಿನ ಕುರಿತು ಪೂರ್ವಾನುಮತಿ ಪಡೆದ ಬಗ್ಗೆ, ಉಳಿದ ವಿಷಯಗಳ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ನನ್ನ ತಂದೆಯ ತಂದೆಯ ಹೆಸರು ರುಕ್ಮಾಜಿ ಎಂದರೆ ಸರಿ. ನಾನು ಮತ್ತು ನನ್ನ ಸಹೋದರಿಯರು ಸೇರಿ ಕ್ರಯಪತ್ರಗಳ ದೃ.ನಕಲುಗಳನ್ನು ಉಪನೊಂದಣಾಧಿಕಾರಿಗಳ ಕಚೇರಿಯಿಂದ ಪಡೆದುಕೊಂಡೆವು. ನಮ್ಮ 4 ಜನ ಅಕ್ಕ ತಂಗಿಯರಲ್ಲಿ ನನಗೆ ಮತ್ತು ಮಂಜುಳಾ ಇವರಿಗೆ ಹೆಚ್ಚು ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ನನ್ನ ತಂಗಿ ಗಂಡ ಸುರೇಶ್ ಗೋಡ್ಕೆ ಈತ ಸಾಕಷ್ಟು ಪ್ರಭಾವಿ ವ್ಯಕ್ತಿ ಇದ್ದು, ಆತ ನಮಗೆ ಈ ದಾವೆ ಸಲ್ಲಿಸುವಲ್ಲಿ ಸಹಾಯ ಮಾಡಿದ್ದಾನೆ ಎಂದರೆ ಸರಿಯಲ್ಲ. ನಾವು ವಕೀಲರಿಗೆ ಕೊಟ್ಟು ಈ ದಾವೆಗಳನ್ನು ತೆಗೆಸಿಕೊಂಡೆವು. ದಿನಾಂಕಃ23-03-2008 ರಲ್ಲಿ ಜಿ.ಪಿ.ಎ ಯ ಪ್ರತಿ ನನ್ನ ವಕೀಲರ ಬಳಿ ಇರಬಹುದು.

ಸಾಕ್ಷಿಗೆ ಮೂಲ ಜಿ.ಪಿ.ಎ ತೋರಿಸಿ ಅದರಲ್ಲಿ ಇರುವ ಪೋಟೋ ನನ್ನ ತಾಯಿಯದು ಎಂದರೆ ಸರಿ. ಸದರಿ ಜಿ.ಪಿ.ಎ ಯನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಈ ನಿ.ಡಿ-1 ಕ್ಕೆ 4 ನೇ ಪ್ರತಿವಾದಿ, ಕೃಷ್ಣಪ್ಪ,ಅಣ್ಣಪ್ಪ ಮತ್ತು ರವಿ ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಪರುಶುರಾಮಪ್ಪ ಮಾಡಿಕೊಟ್ಟ ಜಿ.ಪಿ.ಎ ತೋರಿಸಿ ಕೇಳಲು ಸಾಕ್ಷಿ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೃಷ್ಣಪ್ಪ ಮಾಡಿಕೊಟ್ಟ ಜಿ.ಪಿ.ಎ ಯನ್ನು ತೋರಿಸಿ ಕೇಳಲು ಅದರಲ್ಲಿ ಕಾಣುವ ಪೊಟೋ ನನ್ನ ಅಣ್ಣ ಎಂದರೆ ಸರಿ. ನನ್ನ ಅಣ್ಣ ಕೃಷ್ಣಪ್ಪನಿಗೆ ಗಣೇಶ, ನಾಗರಾಜ ಮತ್ತು ಮೋಹನ ಎಂಬ 3 ಜನ ಮಕ್ಕಳು ಎಂದರೆ ಸರಿ. ನನ್ನ ಅಣ್ಣನ ಮಕ್ಕಳು ಸಾಕ್ಷಿದಾರರು ಎಂದು ಈ ಜಿ.ಪಿ.ಎ ಗೆ ಸಹಿ

ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಿ.ಪಿ.ಎ ನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಣ್ಣಪ್ಪ ಮಾಡಿಕೊಟ್ಟ ಜಿ.ಪಿ.ಎ ತೋರಿಸಿ ಕೇಳಲು, ಆತನ ಪೊಟೋ ನೋಡಿ ಗುರುತಿಸಿದ್ದು, ಸದರಿ ಜಿ.ಪಿ.ಎ ನ್ನು ನಿ.ಡಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ 4 ನೇ ಪ್ರತಿವಾದಿ ಮಾಡಿಕೊಟ್ಟ ಜಿ.ಪಿ.ಎ ತೋರಿಸಿ ಕೇಳಲು ಅದರಲ್ಲಿ ಕಾಣುವ ವ್ಯಕ್ತಿ ನಂದಾ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ರವಿ ಮಾಡಿಕೊಟ್ಟ ಜಿ.ಪಿ.ಎ ತೋರಿಸಿ ಕೇಳಲು ಅದರಲ್ಲಿ ಕಾಣುವ ವ್ಯಕ್ತಿ ನಂದಾ ಎಂದರೆ ಗೊತ್ತಿಲ್ಲ. ರವಿ ಯಲ್ಲಪ್ಪ ಕಂಡಾರೆ ಇಮಾಮ್ ಮೊಹಲ್ಲ ಎಂಬ ವ್ಯಕ್ತಿ ನನ್ನ ಸಹೋದರ ಹೊರತುಪಡಿಸಿ ಬೇರೆ ಯಾರು ಇಲ್ಲ ಎಂದರೆ ಸರಿ. ಅದೇ ರೀತಿ ನಂದಾ ಬಾಯಿ ಕೋಂ ಬಾಬು ಕಂಡಾರೆ ಎಂದು ನನ್ನ ಅತ್ತಿಗೆ ಹೊರತುಪಡಿಸಿ ಬೇರೆ ಯಾರು ಇಮಾಮ್ ಮೊಹಲ್ಲಾದಲ್ಲಿ ಯಾರು ಇಲ್ಲ ಎಂದರೆ ಸರಿ. ಅದೇ ರೀತಿ ಪರುಶುರಾಮಪ್ಪ ಎಲ್ಲಪ್ಪ ಕಂಡಾರೆ ಇಮಾಮ್ ಮೊಹಲ್ಲ ಎಂಬ ವ್ಯಕ್ತಿ ನನ್ನ ಸಹೋದರ ಹೊರತುಪಡಿಸಿ ಬೇರೆ ಯಾರು ಇಲ್ಲ ಎಂದರೆ ಸರಿ. ನನ್ನ ತಾಯಿ ತೀರಿಕೊಂಡ ನಂತರ ನಾನು ಈ ದಾವೆಯಲ್ಲಿ ತಿದ್ದುಪಡಿ ವಾದಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ನನ್ನ ಅತ್ತಿಗೆ ಮತ್ತು ಉಳಿದ ಸಹೋದರರ ವಿಳಾಸವನ್ನು ಇಮಾಮ್ ಮೊಹಲ್ಲಾ ಎಂದು ತಿಳಿಸಿದ್ದೇನೆ ಎಂದರೆ ಸರಿ. ಈಗಲೂ ಅವರು ಅಲ್ಲೇ ವಾಸ ಇದ್ದಾರೆ ಎಂದರೆ ಸರಿ. ನಿ.ಪಿ-4 ರಿಂದ 9 ಕ್ರಯಪತ್ರಗಳ ಜೊತೆಗೆ ಎಷ್ಟು ಕ್ಷೇತ್ರದ ಜಮೀನು ಮಾರಾಟ ಆಗಿದೆ ಎಂದು ತೋರಿಸಲು ನಾನು ಸರ್ವೆ ಸ್ಕೆಚ್ ನ ನಕಲು ಪ್ರತಿ ಸಹ ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿ.ಪಿ-2 ಮತ್ತು 3 ರಲ್ಲಿ 19 ಮತ್ತು 20 ನೇ ಪ್ರತಿವಾದಿಯ ಹೆಸರಿಗೆ ತಲಾ 2 ಎಕರೆ 8 ಕಾಲು ಗುಂಟೆ ಮತ್ತು 2 ಎಕರೆ 19.12 ಗುಂಟೆ

ಇದ್ದ ಬಗ್ಗೆ ನಮೂದು ಇದೆ ಎಂದರೆ ಸರಿ. 4 ನೇ ವಾದಿ ಹರಿಹರದಲ್ಲಿ ವಾಸ ಇರುತ್ತಾಳೆ. ನಿ.ಪಿ-1 ನ್ನು ಈ ದಾವೆ ಹಾಕುವ ಮೊದಲು ಈ ದಾವೆಗೆ ಅನುಕೂಲ ಆಗುವ ರೀತಿಯಲ್ಲಿ ವಂಶವೃಕ್ಷವನ್ನು ಬರೆಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರಗಳು ಅಸಿಂಧು ಎಂದು ಕೇಳಿ ಪ್ರತ್ಯೇಖ ದಾವೆ ಮಾಡಿಲ್ಲ. ದಿನಾಂಕಃ27-03-2008 ರ ಈ ದಾವೆಯ ಜಮೀನು ಮಾರಾಟ ಮಾಡುವ ಮೊದಲು ಡಿ.ಸಿ ಇವರಿಂದ ಪಡೆದ ಪೂರ್ವಾನುಮತಿ ಪತ್ರವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. 1980 ರಲ್ಲಿ ನನ್ನ ತಂದೆಗೆ ಈ ಜಮೀನು ಭೂನ್ಯಾಯಮಂಡಳಿಯಿಂದ ಮಂಜೂರು ಆಗಿತ್ತು ಎಂದರೆ ಸರಿ. 15 ವರ್ಷ ಮಾರಾಟ ಮಾಡಬಾರದು ಎಂಬ ಷರತ್ತು ಇತ್ತು ಎಂದರೆ ಗೊತ್ತಿಲ್ಲ. ಷರತ್ತು ಅವಧಿ ಮುಗಿದು 7-8 ವರ್ಷಗಳು ಕಳೆದಿದ್ದರೂ, ಮುಂದೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಡಿ.ಸಿ ಇವರ ಪೂರ್ವಾನುಮತಿಯನ್ನು ಶಿವಪ್ಪ ಇವರು ಅಧಿಕಾರ ಪತ್ರ ಹೊಂದಿದವರಾಗಿ ಮಾರಾಟ ಮಾಡುವ ಮೊದಲು ಪಡೆದುಕೊಂಡರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ್-68 ಎಂದು ಇದ್ದು, ಒಟ್ಟು ಕ್ಷೇತ್ರ 5 ಎಕರೆ ಇದೆ. ಈ 5 ಎಕರೆಯಲ್ಲಿ ಅರ್ಧ ಎಕರೆ ರಸ್ತೆಗೆ ಹೋಗಿ 4 ವರೆ ಎಕರೆ ಉಳಿದ ಬಗ್ಗೆ ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ದಾವೆಯಲ್ಲಿ 19 ಮತ್ತು 20 ನೇ ಪ್ರತಿವಾದಿಗೆ ಎಷ್ಟು ವಿಸ್ತೀರ್ಣದ ಜಮೀನು ಮಾರಾಟ ಆಗಿದೆ ಎಂದು ಗೊತ್ತಿದ್ದ ಕಾರಣ, ವಾದ ಪತ್ರದಲ್ಲಿ ಆ ರೀತಿ ತಿಳಿಸಿದ್ದೇವೆ ಎಂದರೆ ಸಾಕ್ಷಿ ಪಹಣಿ ಪ್ರಕಾರ ತಿಳಿಸಿದ್ದೇವೆ ಎಂದು ಹೇಳುತ್ತಾರೆ. ನನ್ನ ತಾಯಿ ಮತ್ತು ಸಹೋದರರ ಹೆಸರಿನಲ್ಲಿ ದಾವಾ ಆಸ್ತಿಗಳು ಇದ್ದ ಬಗ್ಗೆ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ವಾದಪತ್ರದಲ್ಲಿ ತಿಳಿಸಿದ ಚಕ್ ಬಂದಿ ಮತ್ತು ವಿಸ್ತೀರ್ಣವನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಬರೆದುಕೊಂಡಿದ್ದು, ವಾಸ್ತವ ಅಂಶದಿಂದ ದೂರ ಇದೆ ಎಂದರೆ ಸರಿಯಲ್ಲ. 2002 ರ ರಾಜೀ ಡಿಕ್ರಿ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

**ಮುಂದಿನ ಪಾಟೀ ಸವಾಲಿಗೆ 19 ಮತ್ತು 20 ನೇ ಪ್ರತಿವಾದಿಗಳ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.